## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ
## ಅಫಜಲಪೂರ

ಸಿಸಿ ನಂ.220/2016

ಚಾಸಾ-1 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕಃ 23.08.2017

| | | |
|---|---|---|
| ಹೆಸರು | ಃ | ರಾಮಬಾಯಿ ರಾಠೋಡ |
| ತಂದೆಯ ಹೆಸರು | ಃ | ಸೀತುರಾಮ |
| ವಯಸ್ಸು | ಃ | 50-ವರ್ಷ |
| ಉದ್ಯೋಗ | ಃ | ಮನೆಗೆಲಸ |
| ವಾಸಸ್ಥಳ | ಃ | ಬಡದಾಳ, ತಾ. ಅಫಜಲಪೂರ |

ಮುಖ್ಯ ವಿಚಾರಣೆ ಃ ಎಪಿಪಿ ಯವರಿಂದ

ಚಾಸಾ-4 ಮತ್ತು 5 ನನ್ನ ಮಗು ಮತ್ತು ಗಂಡನಾಗಬೇಕು. ಆರೋಪಿತನ್ನು ನನ್ನ ದೊಡ್ಡ ಮಾವನ ಮಗನಾಗಬೇಕು. ಬಡದಾಳ ಸೀಮಾಂತರದಲ್ಲಿ ನಮಗೆ ಸಂಬಂಧಿಸಿದ 4-ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನ ಪಕ್ಕದಲ್ಲಿ ಆರೋಪಿತ ಜಮೀನು ಇರುತ್ತದೆ. 2-ವರ್ಷದ ಹಿಂದೆ ಒಂದು ದಿನ ನಮ್ಮ ಜಮೀನಿಗೆ ಇರುವ ನೀರಿನ ಪೈಪನ್ನು ಆರೋಪಿತನ ತಮ್ಮನಾದ ಸುನೀಲನು ಒಡೆದು ಹಾಕಿದ್ದನು ಅದನ್ನು ಸರಿಪಡಿಸಿದ ನಂತರ ಮರುದಿನ ಆರೋಪಿತು ಮುಂಜಾನೆ 7-ಗಂಟೆ ಸಮಯದಲ್ಲಿ ಅದೇ ಸ್ಥಳದಲ್ಲಿ ಪೈಪನ್ನು ಒಡೆಯುತ್ತಿದ್ದನು. ಅದನ್ನು ಪ್ರಶ್ನಿಸಿದ ನನಗೆ ಆರೋಪಿತನು ಅವಾಚ್ಯ ಶಬ್ದಗಳಿಂದ ಬೈದು ಕಟ್ಟಿಗೆಯಿಂದ ಎಡಗೈ ಮುಂಗೈ ಮೇಲೆ ಹೊಡೆದಿರುತ್ತಾನೆ. ಇದರಿಂದ ನನ್ನ ಮುಂಗೈ ಮೂಳೆ ಮುರಿತ ಉಂಟಾಗಿರುತ್ತದೆ ಮತ್ತು ನನ್ನ ಬೆನ್ನು ಹಾಗೂ ಮೈಮೇಲೆ ಹೊಡೆದಿದ್ದನು. ಸದರಿ ಜಗಳವನ್ನು ಚಾಸಾ-3 ರಿಂದ 6 ರವರು ಬಿಡಿಸಿರುತ್ತಾರೆ. ಸದರಿ ಆರೋಪಿತ ಹಲ್ಲೆಗೆ ಬಳಸಿದ ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ ಸಾಕ್ಷಿ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಬಡಿಗೆಯನ್ನು ನೋಡಿ ಗುರುತಿಸಿದ್ದು ಅದನ್ನು ಎಂ.ಒ-1 ಎಂದು ಗುರುತಿಸಲಾಯಿತು.

ಆರೋಪಿತನು ಮಾಡಿದ ಹಲ್ಲೆಯಿಂದ ನನಗಾದ ಗಾಯಗಳ ಉಪಚಾರಕ್ಕೆಂದು ಮೊದಲಿಗೆ ಸ.ಆ. ಅಫಜಲಪೂರದಲ್ಲಿ ದಾಖಲಾಗಿ ನಂತರ ಸ.ಆ. ಕಲಬುರಗಿಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಸದರಿ ಉಪಚಾರಕ್ಕೆಂದು ಅಂದಾಜು ಒಂದು ಲಕ್ಷ ರೂ.ಗಿಂತಲೂ ಹೆಚ್ಚು ಖರ್ಚು ಮಾಡಿರುತ್ತೇನೆ. ಆರೋಪಿತನ ವಿರುದ್ಧ ಕ್ರಮ ಕೈಕೊಳ್ಳಲು ಅದೇ ದಿನ ಹೇಳಿಕೆ ಪಿರ್ಯಾದಿ ನೀಡಿರುತ್ತೇನೆ. ಸಾಕ್ಷಿಯು ಹೇಳಿಕೆ ಪಿರ್ಯಾದನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ ಆರೋಪಿತನ ಪರ ಶ್ರೀ ಕೆಜಿಪಿ ವಕೀಲರಿಂದ

ನಮ್ಮ ಜಮೀನಿನ ಸುತ್ತಮುತ್ತಲೂ ನಮ್ಮ ಸಮಾಜದ ಜನರ ಜಮೀನುಗಳಿರುತ್ತವೆ ಮತ್ತು ಅವರೆಲ್ಲರೂ ಜಮೀನಿನಲ್ಲಿ ದಿನಂಪ್ರತಿ ಇರುತ್ತಾರೆ. ಸದರಿ ಚಾಸಾ-3 ಮತ್ತು 6 ರವರು ಜಮೀನಿನಲ್ಲಿ ವಾಸವಿರುತ್ತಾರೆ. ಆರೋಪಿತನ ಜಮೀನು ಹಾಗೂ ನಮ್ಮ ಜಮೀನು ನೀರಾವರಿಯಿಂದ ಕೂಡಿರುತ್ತದೆ. ಆರೋಪಿತನ ತಂದೆಯೇ ನೀರು ಸರಬರಾಜು ಮಾಡಲು ಕರೆಂಟ ಟಿಸಿ ಕೂಡಿಸುವ ವ್ಯವಸ್ಥೆಯನ್ನು ಸ್ವಂತ ಖರ್ಚಿನಲ್ಲಿ ಮಾಡಿಸಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ನಾಲ್ಕು ಜನರ ಮದ್ಯೆ ಹಣ ಖರ್ಚು ಮಾಡಿ ಹಾಕಿಸಿರುತ್ತೇವೆ.

ನಾವು ವಿದ್ಯುತ್ ಸಂಪರ್ಕವನ್ನು ಅನಧಿಕೃತವಾಗಿ ನಮ್ಮ ಜಮೀನಿಗೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತನ ಜಮೀನಿಗೆ ಇರುವ ವಿದ್ಯುತ್ ಸಂಪರ್ಕವನ್ನು ಕಟ್ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತನು ಜಮೀನಿನಲ್ಲಿ ರಾತ್ರಿ ವಾಸ್ತವ್ಯ ಮಾಡುವದಿಲ್ಲ. ಆದರೆ ನಾವು ಜಮೀನಿನಲ್ಲಿ ವಾಸ ಮಾಡುತ್ತೇವೆ. ನಾವು ಆರೋಪಿತನ ಜಮೀನಿನ ನೀರಿನ ಪೈಪಲೈನ ಮತ್ತು ವಿದ್ಯುತ್ ಸಂಪರ್ಕವನ್ನು ಹಾಳು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಚೆಕಬಂದಿ ನನಗೆ ಹೇಳಲಾಗುವದಿಲ್ಲ. ಘಟನೆ ನಡೆದ ಸಮಯದಲ್ಲಿ 4-5 ಜನರಿದ್ದರು. ಅವರಲ್ಲಿ ಚಾಸಾ-6 ರವರನ್ನು ಮಾತ್ರ ನಾನು ನೋಡಿರುತ್ತೇನೆ. ಉಳಿದವರ ಬಗ್ಗೆ ನಾನು ಗಮನಿಸಿಲ್ಲ.

ಚಾಸಾ-6 ರವರಿಗೂ ಹಾಗೂ ಆರೋಪಿತನ ತಂದೆಗೂ ಬಹಳ ದಿನಗಳಿಂದ ಮನಸಾಮನಸಾ ಸರಿ ಇರುವದಿಲ್ಲ. ಆದರೆ ಚಾಸಾ-6 ರವರ ಕುಟುಂಬದವರು ನಮ್ಮ ಜೊತೆ ಚೆನ್ನಾಗಿರುತ್ತಾರೆ. ಘಟನೆಯು ಮುಂಜಾನೆ 7-ಗಂಟೆಗೆ ಆಗಿರುತ್ತದೆ. ಆದರೆ ಯಾವ ದಿನಾಂಕ ಹಾಗೂ ತಿಂಗಳಲ್ಲಿ ಆಗಿರುತ್ತದೆ ಎಂದರೆ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ನಮಗೆ ಸಂಬಂಧಿಸಿದ ಜಮೀನಿನ ಸರ್ವೆ ನಂಬರ ನನಗೆ ಹೇಳಲಾಗುವುದಿಲ್ಲ. ಜಗಳದ ಸಮಯದಲ್ಲಿ ನಮ್ಮ ಜಮೀನಿನ ಪಕ್ಕದಲ್ಲಿರುವ ಇನ್ನೊಬ್ಬ ಅಣ್ಣತಮ್ಮಂದಿರಾದ ಹರಿಸಿಂಗ, ಬೊಜು, ಶಾಂತಾಬಾಯಿ ಮತ್ತು ಅವರ ಮನೆಯ ಸದಸ್ಯರು ಇರುವುದು ನಾನು ನೋಡಿಲ್ಲ.

ನಾವು ಆರೋಪಿತನ ಜಮೀನಿಗೆ ಇರುವ ನೀರಿನ ಸಂಪರ್ಕದ ಪೈಪನ್ನು ಹಾಗೂ ವಿದ್ಯುತ್ ಸಂಪರ್ಕವನ್ನು ಹಾಳು ಮಾಡಿ ಅವರ ಕಬ್ಬನ್ನು ಒಣಗುವಂತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಘಟನೆಯಾದ ನಂತರ ಪೋಲಿಸ ಠಾಣೆಗೆ ಮದ್ಯಾಹ್ನ 2-ಗಂಟೆ ಸಮಯದಲ್ಲಿ ಹೋಗಿರುತ್ತೇನೆ. ಆನಂತರ ಮದ್ಯಾಹ್ನ ಸ.ಆ. ಅಫಜಲಪೂರಕ್ಕೆ 3-ಗಂಟೆ ಸಮಯದಲ್ಲಿ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ಅಲ್ಲಿಂದ ಕಲಬುರಗಿ ಆಸ್ಪತ್ರೆಗೆ ಸಾಯಂಕಾಲ ಕರೆದುಕೊಂಡು ಹೋಗಿರುತ್ತಾರೆ.

ಪೋಲಿಸ ಠಾಣೆಯಲ್ಲಿ ಘಟನೆ ಕುರಿತು ಪೋಲಿಸರು ನಾನು ಹೇಳಿದಂತೆ ಬರೆದುಕೊಂಡಿರುತ್ತಾರೆ. ಆದರೆ ಅದರಲ್ಲಿ ಏನು ಬರೆದಿರುತ್ತಾರೆಂದು ನಾನು ತಿಳಿದುಕೊಂಡಿಲ್ಲ. ಘಟನೆಯಾದ ನಂತರ ನನಗೆ ತಲೆಸುತ್ತು ಬರುತ್ತಿತ್ತು ಮತ್ತು ನನಗೆ ಮಾತನಾಡಲು ಅಷ್ಟೊಂದು ಬರುತ್ತಿರಲಿಲ್ಲ.

ನಾನು ಆರೋಪಿತನಿಗೆ ನಮ್ಮ ಜಮೀನಿನ ಬಾಂದಾರಿ ಹತ್ತಿರ ಪೈಪಿಗೆ ಏನು ಮಾಡುತ್ತಿದ್ದಿ ಎಂದು ಕೇಳಿದಾಗ ಆರೋಪಿತನು ನನಗೆ ಅವಾಚ್ಯ ಶಬ್ದದಿಂದ ಬೈದು ಎಂ.ಓ-1 ರಿಂದ ಹೊಡೆದು ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿರುತ್ತಾನೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಆರೋಪಿತನು ಖಾಯಂ ಆಗಿ ಮೆತ್ರೆ ತಾಂಡಾದಲ್ಲಿ ವಾಸವಿರುತ್ತಾರೆ. ಆರೋಪಿತನು ಮಹಾರಾಷ್ಟ್ರಕ್ಕೆ 3-ವರ್ಷದಿಂದ ದುಡಿಯಲು ಹೋಗಿ ಅಲ್ಲೆ ಇರುತ್ತಾನೆ ಎಂದರೆ ಸರಿಯಲ್ಲ. ಸದರಿ ಆರೋಪಿ ಹಲ್ಲೆಗೆ ಬಳಸಿದ ಬಡಿಗೆ 5-6 ಫೂಟು ಉದ್ದ ಇರಬಹುದು. ಸದರಿ ಬಡಿಗೆಯ ಮೇಲಿನ ತೊಗಟೆಯನ್ನು

ಸುಲಿದಿತ್ತು. ಆರೋಪಿತನು ಹಲ್ಲೆಗೆ ಬಳಸಿದ ಬಡಿಗೆಯನ್ನು ಪೋಲಿಸರಿಗೆ ನಾನೇ ನೀಡಿರುತ್ತೇನೆ. ಸದರಿ ಬಡಿಗೆಯು ನ್ಯಾಯಾಲಯದ ಮುಂದೆ ಈ ದಿನ ಇರುತ್ತದೆಯೋ ಇಲ್ಲವೊ ಎಂದು ನನಗೆ ಹೇಳಲಾಗುವುದಿಲ್ಲ. ಎಂ.ಓ-1 ತೊಗಟೆ ಸುಲಿಯದ ಬಡಿಗೆಯಾಗಿದ್ದು ಅದನ್ನು ನಾನು ಪೋಲಿಸರಿಗೆ ನೀಡಿಲ್ಲ. ಎಂ.ಓ-1 ರಿಂದ ಆರೋಪಿ ಹಲ್ಲೆ ಮಾಡಿಲ್ಲ. ಆರೋಪಿ ನನಗೆ ನನ್ನ ಮುಂಗೈಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ನಾನು ರೈತಾಪಿ ಕೆಲಸದಲ್ಲಿ ಮಾಡಿಕೊಂಡ ಅವಗಡವನ್ನು ಆರೋಪಿತನ ಮೇಲೆ ಹಾಕಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ